| **SRI BHAGAWAN MAHAVEER JAIN COLLEGE**<br>Vishweshwarapuram, Bangalore.<br><br>**Mock Question Paper** – January 2020 | **Course:** I year PUC<br>**Subject:** Kannada<br>**Max. Marks:** 100<br>**Duration:** 3:15 |
|---|---|

**ಸೂಚನೆ: ಪ್ರಶ್ನೆ ಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.**

## ಅ–ವಿಭಾಗ

**I ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ: 1 x 10 = 10**

1 ನಗೆಗೆ ಈಡಾಗುವುದು ಯಾವುದು?
2 ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?
3 ಅಮ್ಮಿ ಜಗತ್ತಿಗೆ ಎಂತಹ ಬಟ್ಟೆಯನ್ನು ತೊಡಿಸುವಳು?
4 ನಾಡಿಗೆ ಯಾರ ಕಾಟ ಕೊನೆಗೊಂಡಿದೆ?
5 ಕುಟುಂಬ ಯೋಜನಾ ವಿಸ್ತರಣಾಧಿಕಾರಿಯ ಹೆಸರೇನು?
6 ಮಾಸ್ತರರಿಗೆ ಇನ್ನು ಎಷ್ಟು ವರ್ಷ ಸೇವೆ ಇತ್ತು?
7 ಶಕುಂತಲೆಯ ತಾಯಿಯ ಹೆಸರೇನು?
8 ಕತ್ತಲೆಯ ನಿಜಜನಕ ಯಾರು?
9 ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ?
10 ರಾಜಕುಮಾರಿಗೆ ಬಂದ ರೋಗ ಯಾವುದು?

## ಆ–ವಿಭಾಗ

**II ಅ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 4 = 8**

11 ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?
12 ಶಿಶುಮಕ್ಕಳ ಪ್ರೇಮಕ್ಕೆ ಮಾದಪ್ಪ ಹೇಗೆ ಬಂದನು?
13 ಮಗು ಹಣ್ಣಿನಂಗಡಿಯಂತಾಗಬೇಕಾದುದು ಎಲ್ಲಿ?
14 ಹೊಟ್ಟೆಯೊಳಗಿನ ಮಗುವು ಯಾವ ವರವನ್ನು ಬೇಡುತ್ತಿದೆ?
15 ದಿಕ್ಕು ಬಂದ ಕಡೆಗೆ ನಡೆದ ಕವಿಗೆ ಆದ ಅನುಭವವೇನು?

**ಆ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 3 = 6**

16 ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
17 ಮಹಾನ್‌ವ್ಯಕ್ತಿಗಳ ದರ್ಶನ ಅರ್ಥವಾಗುವುದು ಹೇಗೆ?
18 ರೈತರನ್ನು ಶೋಷಣೆ ಮಾಡಿದವರು ಯಾರು?
19 ಹುಲಿಯ ಗುಹೆಯಲ್ಲಿ ನಾಪಿತ ಏನನ್ನು ಕಂಡನು?

**ಇ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2 x 3 = 6**

20 ಬೆಟ್ಟದ ಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
21 ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾಹ್ಕಾರಣ್ಣನು ಏನು ಹೇಳುತ್ತಾನೆ?
22 ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23 ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರು ಸಾರಿಸುತ್ತಾರೆ?

## ಇ–ವಿಭಾಗ

**III ಅ ಎರಡನ್ನು ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 2 = 6**

24 ನೀಂ ಕ್ರಮ ವಿಪರ್ಯಾಂ ಮಾಡುವುದೇ.
25 ಕಾವೇರಿ ಸೋಂಕಿದರ ಪಾಪಮಂ ಸೋವೇರಿ.
26 ಪಾಶವಾಗಿದೆಯವ್ವ ನನ್ನುಸಿರಿಗೆ.

**ಆ ಒಂದನ್ನು ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

27 ಲೋ ಹುಡುಗ ಆ ಫೋಟೋ ಯಾರದಯ್ಯಾ.

28 ಜೀತದ ಕೆಲಸ ಯಾರು ಮಾಡುತ್ತಾರೆ?

**ಇ ಒಂದನ್ನು ಕುರಿತು ಸಂದರ್ಭಸೂಚಿಸಿ ಸ್ವಾರಸ್ಯ ವಿವರಿಸಿ: 3 x 1 = 3**

29 ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು.

30 ಚಿನ್ನ ತಿಂದು ಬದುಕಲಾಗುತ್ತ !

## ಈ–ವಿಭಾಗ

**IV ಅ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 3 = 12**

31 ಅಭಿಮನ್ಯುವಿನ ಶೌರ್ಯಸಾಹಸಗಳನ್ನು ದುರ್ಯೋಧನ ಹೇಗೆ ಹೊಗಳುತ್ತಾನೆ?

32 ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ?

33 ಕುವೆಂಪು ರವರು 'ಕೂಗಾಟದ ರಾಜಕೀಯ ನಾಟಕ ಎಂದು ಹೇಳಿರುವ ಹಿನ್ನಲೆ ಏನು?

34 ಕವಿಯ ಆತಂಕಕ್ಕೆ ಕಾರಣವಾದ ಸನ್ನಿವೇಶಗಳು "ಮತ್ತೆ ಸೂರ್ಯ ಬರುತ್ತಾನೆ"ಎಂಬ ಕವಿತೆಯಲ್ಲಿ ಮೂಡಿ ಬಂದಿದೆ?

**ಆ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 2 = 8**

35 ಡಾ.ಸಿ.ಎಚ್ ಲಕ್ಷ್ಮಣಯ್ಯನವರ ರಾಗಿ ಸರಿಶೋಧನೆ ಮತ್ತು ರಾಗಿ ಪ್ರೀತಿಯನ್ನು ವಿವರಿಸಿ?

36 ಶಾಸ್ತ್ರಿ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ?

37 ಹುಲಿಯಿಂದ ಪಾರಾಗಲು ನಾಪಿತ ಕಲ್ಪಿಸಿದ ಕತೆ ಯಾವುದು?

**ಇ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 2 = 8**

38 ಸೈತಾನನು ತನ್ನ ಪರಿಚಯ ಮಾಡಿಕೊಂಡ ಬಗೆ ಹಾಗೂ ಬಂದಂಥ ಕಾರಣವೇನು ತಿಳಿಸಿರಿ ?

39 ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?

40 ಬೋಳೇಶಂಕರನು ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ?

## ಉ–ವಿಭಾಗ

**V ಅ ಒಂದು ಪದ್ಯದ ಭಾವಾರ್ಥ ಬರೆಯಿರಿ: 5 x 1 = 5**

41 ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಳಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ

**ಅಥವಾ**

42 ಏಕೆ ನಿಂದಹೆ ಪೋಗು ಸಾಮಿತ್ರಿ ಕೋಪಿಸನೆ
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ
ಗೀ ಕಾಡೊಳುಗ್ರಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು
ಲೋಕದರ ಸೇಗೈದೊಡಂ ತನ್ನ ಕಿಂಕರ
ರ್ಬೇಕುಬೇಡೆಂದು ಪೇಳರೆ ಭರತ ಶತ್ರುಘ್ನ
ರೀ ಕೆಲಸ ಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ

## ಊ–ವಿಭಾಗ

**ಆ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ: 2 x 6 = 12**

| | | | |
|---|---|---|---|
| 43 | **ಪದಗಳ ಅರ್ಥ ಬರೆಯಿರಿ:–** | ನರ | ಅಲರ್ದ |
| 44 | **ಬಿಡಿಸಿ ಬರೆಯಿರಿ:–** | ಕಟ್ಟೋಗರ | ಕಣ್ಮಲರ್ |
| 45 | **ತದ್ಭವಗಳನ್ನು ಬರೆಯಿರಿ:–** | ಯಾತ್ರೆ | ರತ್ನ |
| 46 | **ಗ್ರಾಂಥಿಕ ರೂಪ ಬರೆಯಿರಿ:–** | ಬ್ಯಾಡರ | ಒತ್ಕೊಂಡು |
| 47 | **ವಾಕ್ಯಗಳಲ್ಲಿ ಬಳಸಿ:–** | ಅಡಿಪಾಯ | ಅಜಗಜಾಂತರ |
| 48 | **ಸಮಾನಾರ್ಥಗಳನ್ನು ಬರೆಯಿರಿ:–** | ದಿನಕರ | ಇಳೆ |
| 49 | **ದ್ವಿರುಕ್ತಿಗೆ ಎರಡು ಉದಾ ಕೊಡಿ.** | | |

**ಇ ಒಂದನ್ನು ಕುರಿತು ಪ್ರಬಂಧ ಬರೆಯಿರಿ: 5 x 1 = 5**

50 ಬರಗಾಲ

51 ಯೋಗಾಭ್ಯಾಸ.

**ಈ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ:– 4 x 1 = 4**

52 ಶೈಕ್ಷಣಿಕ ಪ್ರವಾಸ ಹೊರಡಲು ಅನುಮತಿ ಕೋರಿ ಹಾಗೂ ಹಣ ಕಳುಹಿಸುವಂತೆ ತಂದೆಗೆ ಪತ್ರ ಬರೆಯಿರಿ.

53 ನಿಮ್ಮ ಊರಿನ ರಸ್ತೆ ದುರಸ್ತಿ ಬಗೆಗೆ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

**ಉ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ: 4 x 1 = 4**

54 ಮಾಡಿದ್ದುಣ್ಣೊ ಮಹಾರಾಯ.

55 ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

*****